ಪಿ ಡಬ್ಲ್ಯೂ: 1

ದಿನಾಂಕ 06-11-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ವಾದಿ ಪರ ವಕೀಲರಿಂದ:**

ನಾನು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು ಅದರಲ್ಲಿ ಬರೆದ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ. ಅದನ್ನು ಬರೆಯಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ಹಾಜರುಪಡಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಯಿತು.

| ಕ್ರ.ಸಂ. | ನಿಶಾನೆ | ದಾಖಲಾತಿಗಳು |
|---|---|---|
| 1 | ನಿಪಿ 1 | ಡಿಮಾಂಡ್ ರಜಿಸ್ಟರ್ ನ ಧೃಢೀಕೃತ ಪ್ರತಿ |
| 2 | ನಿಪಿ 2 | ಸಿಟಿಎಸ್ ಉತಾರದ ಧೃಢೀಕೃತ ಪ್ರತಿ |
| 3 | ನಿಪಿ 3 | ಪ್ಲಾನ್ ಕಾರ್ಡ್ ನ ಧೃಢೀಕೃತ ಪ್ರತಿ |
| 4 | ನಿಪಿ 4 | ವಂಶಾವಳಿಯ ಡಿಜಿಟಲ್ ಧೃಢೀಕೃತ ಪ್ರತಿ |
| 5 | ನಿಪಿ 5 | ದಿನಾಂಕ 25-10-2023 ರ ಅರ್ಜಿಯ ಧೃಢೀಕೃತ ಪ್ರತಿ |
| 6 | ನಿಪಿ 6 | ದಿನಾಂಕ 09-10-2023 ರ ಪ್ರಮಾಣ ಪತ್ರದ ಧೃಢೀಕೃತ ಪ್ರತಿ |
| 7 | ನಿಪಿ 7 | ದಿನಾಂಕ 11-10-2023 ರ ವಂಶವೃಕ್ಷ ಧೃಢೀಕರಣ ಪತ್ರದ ಧೃಢೀಕೃತ ಪ್ರತಿ |
| 8 | ನಿಪಿ 8 | ದಿನಾಂಕ 27-10-2023 ರ ನೋಟೀಸ್ ನ ಧೃಢೀಕೃತ ಪ್ರತಿ |
| 9 | ನಿಪಿ 9 | ದಿನಾಂಕ 10-07-2019 ರ ಅರ್ಜಿಯ ಧೃಢೀಕೃತ ಪ್ರತಿ |

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.